**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.280/2016**

ಅಸಾಃ 5 (ಚಾಸಾ-8)

| | |
|---|---|
| ಹೆಸರು | ಮೌನೇಶ ಬಡಿಗೇರ |
| ತಂದೆಯ /ಗಂಡನ ಹೆಸರು | ಬಸಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಚಿಮ್ಮಡ |

ದಿನಾಂಕ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-**

ನನಗೆ ಚಾಸಾ-1, 4, 5, 7 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇರುವದಿಲ್ಲ. ಸುಮಾರು 10 ವರ್ಷಗಳ ಹಿಂದೆ ಚಾಸಾ-1 ಮತ್ತು ಆರೋಪಿತರ ನಡುವೆ ಆಸ್ತಿ ಕುರಿತಾಗಿ ಬಾಯಿಮಾತಿನ ಜಗಳವಾಗಿರುತ್ತದೆ. ಇಷ್ಟನ್ನು ಹೊರತು ಪಡಿಸಿ ನನಗೆ ಬೇರೆ ಏನು ಗೊತ್ತಿರುವದಿಲ್ಲ. ಆರೋಪಿತರ ಮೇಲೆ ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿರುವದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 31-10-2015 ರಂದು ಸಂಜೆ 07-00 ಗಂಟೆಗೆ ಚಾಸಾ-1 ರವರು ಆರೋಪಿತರ ವಿರುದ್ದ ಸಿವಿಲ್ ದಾವೆ ಮಾಡಿದ್ದು ಅದೇ ಸಿಟ್ಟಿನಿಂದ ಆರೋಪಿತರೆಲ್ಲರೂ ಗೈರಕಾಯಿದೆಶೀರ ಮಂಡಳಿಯಾಗಿ ಚಾಸಾ-1 ರವರ ಮನೆಯ ಮುಂದೆ ಬಂದು ಅಕೆಯ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಅವರಲ್ಲಿ 04 ನೇ ಆರೋಪಿ ಆಕೆಯ ಕೈ ಹಿಡಿದು ಎಳೆದಾಡಿ ಅವಮಾನ ಪಡಿಸಿದ್ದಾ ಅಲ್ಲದೇ ಆಕೆಯನ್ನು ಕೆಳಗೆ ಬೀಳಿಸಿ ಕೈಯಿಂದ ಹೊಡೆಯುವಾಗ ಚಾಸಾ-5 ರವರು ಬಿಡಿಸಲು ಬಂದಾಗ 8 ನೇ ಆರೋಪಿ ಆಕೆಯ ಕೈ ತಿರುವಿ ಅವಮಾನ ಪಡಿಸಿದ್ದು ಚಾಸಾ-4 ರವರಿಗೆ 1 ರಿಂದ 3 ನೇ ಅರೋಪಿತರು ಕೆಳಗೆ ಬೀಳಿಸಿ ಕೈಯಿಂದ ಹೊಡೆದು ಎಲ್ಲರಿಗೂ ಜೀವ ಬೆದರಿಕೆ ಹಾಕಿದ್ದು ಜಗಳವನ್ನು ನಾನು ಮತ್ತು ಚಾಸಾ-6, 7 ಮತ್ತು 9 ರವರು ಕೂಡಿ ಬಿಡಿಸಿರುತ್ತೇವೆ ಎಂದು ಹೇಳಿ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆಂದು ಸೂಚಿಸುವದು ಸರಿಯಲ್ಲ.

ಸಾಕ್ಷಿಗೆ ಸದರಿ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿದ್ದು, ಸಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ನಿಪಿ-6 ರಲ್ಲಿರುವ ಎಲ್ಲಾ ಸಂಗತಿಗಳು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಂ ಜಿ ಕೆ ವಕೀಲರಿಂದ:- ಇಲ್ಲಾ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.280/2016**

ಅಸಾಃ 4 (ಚಾಸಾ-4)

| | |
|---|---|
| ಹೆಸರು | ಶಂಕರ ತೇಲಿ |
| ತಂದೆಯ /ಗಂಡನ ಹೆಸರು | ಮಲ್ಲಪ್ಪ |
| ವಯಸ್ಸು | 64 ವರ್ಷ |
| ಉದ್ಯೋಗ | ಕೂಲಿ |
| ವಾಸಸ್ಥಳ | ಚಿಮ್ಮಡ |

ದಿನಾಂಕ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-**

ಚಾಸಾ-1 ನನ್ನ ಹೆಂಡತಿ ಚಾಸಾ-5 ನನ್ನ ಮಗಳು. ಚಾಸಾ-6 ನನ್ನ ಅಳಿಯ. ನನಗೆ ಚಾಸಾ-7 ರಿಂದ 9 ಮತ್ತು ಆರೋಪಿತರ ಪರಿಚಯ ಇದೆ. ದಿನಾಂಕ 31-10-2015 ರಂದು ಮನೆ ಕಟ್ಟಿಸುವ ಸಲುವಾಗಿ ನಮ್ಮ ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ. ಆಗ ನನ್ನ ಹೆಂಡತಿಗೆ 4 ನೇ ಆರೋಪಿ ಕೈನ್ನು ಎಳೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ಬಿಡಿಸಲು ಹೋದ ನನಗೆ 1 ರಿಂದ 3 ನೇ ಆರೋಪಿತರು ಕೈಯಿಂದ ಹೊಡೆದಿರುತ್ತಾರೆ ಮತ್ತು ನನ್ನ ಮಗಳಾದ ಚಾಸಾ-5 ರವರಿಗೆ 8 ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದು ಆಕೆಯ ಕೈಯನ್ನು ತಿರುವಿರುತ್ತಾರೆ. ಆಕೆಯನ್ನು ಬಿಡಿಸಲು ಬಂದ ನನ್ನ ಅಳಿಯನಾದ ಚಾಸಾ-6 ರವರನ್ನು 1, 2 ಮತ್ತು 8 ನೇ ಆರೋಪಿತರು ಕೂಡಿ ಆತನಿಗೆ ಬಡಿದಿರುತ್ತಾರೆ. ನಂತರ ಚಾಸಾ-7 ಮತ್ತು 8 ಮತ್ತು ಇತರರು ಜಗಳ ಬಿಡಿಸಿರುತ್ತಾರೆ. ಹೋಗುವಾಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನ ಹೆಂಡತಿಯಾದ ಚಾಸಾ-1 ರವರು ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಜಿ ಕೆ ವಕೀಲರಿಂದ:-**

ಚಾಸಾ-1 ನನ್ನ ಹೆಂಡತಿ ಇರುವ ಕಾರಣ ಆಕೆ ಕೊಟ್ಟ ದೂರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಆಸ್ತಿ ಕುರಿತಾಗಿ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಆರೋಪಿತರು ನಮ್ಮ ಮನೆಗೆ ಬಂದು, ನನಗೆ, ನನ್ನ ಹೆಂಡತಿಗೆ, ನನ್ನ ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದು ನಮಗೆ ಮತ್ತು ನನ್ನ ಅಳಿಯನಿಗೆ ಹೊಡಿ ಬಡಿ ಮಾಡಿ ನಮಗೆ ಜೀವ ಬೆದರಿಕೆ ಹಾಕಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 4 ನೇ ಆರೋಪಿ ನನ್ನ ಹೆಂಡತಿಯ ಕೈ ತಿರುವಿ ಹೊಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಜಗಳ ಬಿಡಿಸಲು ನಾನು ಹೋದಾಗ ನನ್ನ ಕೈ ತಿರುವಿ ಹೊಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-7 ಮತ್ತು 8 ರವರು ಬಂದು ಜಗಳ ಬಿಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.